ವಿ. ರಶ್ಮಿ, ಭಾ.ಆ.ಸೇ.,
ಆಯುಕ್ತರು
ಪದವಿ ಪೂರ್ವ ಶಿಕ್ಷಣ ಇಲಾಖೆ
COMMISSIONER,
DEPARTMENT OF
PRE-UNIVERSITY EDUCATION
GOVT. OF KARNATAKA

ಸಂಖ್ಯೆ: ಪಪೂಶಿಇ/ಸಿಬ್ಬಂದಿ-1/ತರಬೇತಿ-01/2010-11
No.:

ದಿನಾಂಕ: 16-01-2012
Dated:

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರಿಗೆ 2012-13ನೇ ಸಾಲಿಗೆ ಆಡಳಿತ ತರಬೇತಿ ನೀಡುವ ಬಗ್ಗೆ.

ಉಲ್ಲೇಖ: 1. ಪಪೂಶಿಇ/ಶೈಶಾ-04/ಪ್ರಿತರಬೇತಿ.ಆತಸಂ-01/2011-12 ದಿನಾಂಕ 09-11-2011.

2. ಪಪೂಶಿಇ/ಸಿಬ್ಬಂದಿ-1/ತರಬೇತಿ/01/2010-11 ದಿನಾಂಕ 02-01-2012 ಮತ್ತು 03-01-2012.

*****

01. ಆಡಳಿತ ತರಬೇತಿ ಸಂಸ್ಥೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ 800 ಪ್ರಾಂಶುಪಾಲರುಗಳಿಗೆ 40 ತಂಡಗಳನ್ನಾಗಿ "Management Development Programme specially designed for Principals of Department of Pre-University Education" ಎಂಬ ಶೀರ್ಷಿಕೆಯಲ್ಲಿ ಏರ್ಪಡಿಸಿರುವ ತರಬೇತಿ ಕಾರ್ಯಕ್ರಮದ ಮೊದಲನೆ ತಂಡವನ್ನು ಯಶಸ್ವಿಯಾಗಿ ಮುಗಿಸಿರುವುದಕ್ಕೆ ಧನ್ಯವಾದಗಳು. ಅದರಂತೆ, ಎರಡನೇ ತಂಡವು ಕೂಡ ಮುಗಿಯುವ ಹಂತದಲ್ಲಿರುತ್ತದೆ.

02. ಈ ತರಬೇತಿ ಕಾರ್ಯಕ್ರಮವು ನಿಗದಿಪಡಿಸಿರುವ ವೇಳಾಪಟ್ಟಿಯಂತೆ 800 ಪ್ರಾಂಶುಪಾಲರುಗಳಿಗೆ 40 ಪ್ರತಿ ತಂಡಗಳಲ್ಲಿ ಜನವರಿ ತಿಂಗಳಿನಿಂದ ಡಿಸೆಂಬರ್ ತಿಂಗಳಿನವರೆಗೆ ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಇದರ ಜೊತೆಗೆ ಈಗ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ 240 ಉಪನ್ಯಾಸಕರುಗಳಿಗೆ ಪ್ರಾಂಶುಪಾಲರಾಗಿ ಬಡ್ತಿ ನೀಡಲಾಗುತ್ತಿದೆ. ಉಪನ್ಯಾಸಕರ ಹುದ್ದೆಯಿಂದ ಬಡ್ತಿ ಪಡೆಯುತ್ತಿರುವ 240 ಪ್ರಾಂಶುಪಾಲರುಗಳಿಗೂ ಸಹ ಪ್ರತ್ಯೇಕವಾಗಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಹಾಗೂ ಸದರಿ ತರಬೇತಿ ಕಾರ್ಯಕ್ರಮವನ್ನು ನವೆಂಬರ್-2012 ರೊಳಗಾಗಿ ಮುಕ್ತಾಯಗೊಳಿಸುವಂತೆ ಕೋರಲಾಗಿದೆ.

03. ಇದಲ್ಲದೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿಯಲ್ಲಿರುವ 3 ಉಪ ನಿರ್ದೇಶಕರುಗಳಿಗೆ ಹಾಗೂ ಜಿಲ್ಲಾ ಉಸ್ತುವಾರಿಯವನ್ನು ನೋಡಿಕೊಳ್ಳುತ್ತಿರುವ 31 ಜಿಲ್ಲಾ ಉಪ

ನಿರ್ದೇಶಕರುಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಆಡಳಿತ, ಶೈಕ್ಷಣಿಕ ಹಾಗೂ ಪರೀಕ್ಷೆಗಳ ಮೇಲುಸ್ತುವಾರಿ ಹಾಗೂ ಸರ್ಕಾರವು ಜಾರಿಗೆ ತರುವ ವಿವಿಧ ಕಾರ್ಯಕ್ರಮಗಳ ಅನುಷ್ಠಾನವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ತರಬೇತಿಯ ಅವಶ್ಯಕತೆ ಇರುವುದರಿಂದ ಇವರಿಗೂ ಸಹ ಪ್ರತ್ಯೇಕವಾಗಿ 2012ರ ಆಗಸ್ಟ್ ಮಾಹೆಯಲ್ಲಿ ಒಂದು ವಾರದ ತರಬೇತಿಯನ್ನು ಏರ್ಪಡಿಸಲು ವಿನಂತಿಸಲಾಗಿದೆ.

**04.** ಇದನ್ನು ಹೊರತುಪಡಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 11 ಸಹಾಯಕ ನಿರ್ದೇಶಕರು ಹಾಗೂ 7 ಶಾಖಾಧಿಕಾರಿಗಳಿಗೆ ಕಚೇರಿ ಆಡಳಿತ, ಗಣಕ ಹಾಗೂ ಲೆಕ್ಕಪತ್ರ ನಿರ್ವಹಣೆ ಕುರಿತು ಪ್ರತ್ಯೇಕವಾಗಿ ಒಂದು ವಾರದ ತರಬೇತಿ ಕಾರ್ಯಕ್ರಮವನ್ನು 2012ರ ಜುಲೈ ಮಾಹೆಯಲ್ಲಿ ಏರ್ಪಡಿಸಲು ಕೋರಲಾಗಿದೆ. ತರಬೇತಿಯನ್ನು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಏರ್ಪಡಿಸಲು ಕೋರಲಾಗಿದೆ.

| Cadre | Number of Officials | Required Content of Training Programme | Duration | Time |
|---|---|---|---|---|
| Group-A Principals | Additional 240 to the 800 aleady enrolled | 1. Karnataka Financial Code.<br>2. Manual of Contingent Expenditure<br>3. ಕಾಲೇಜು ವಿಭಾಗದ ವೇತನ ಬಿಲ್ಲು, ಸಾದಿಲ್ವಾರು ಬಿಲ್ಲು ಮತ್ತಿತರ ಬಿಲ್ಲುಗಳನ್ನು ಡ್ರಾ ಮಾಡುವುದು.<br>4. ಸರ್ಕಾರಿ/ಸರ್ಕಾರೇತರ ನಗದು ಪುಸ್ತಕಗಳ/ವಹಿಗಳ ನಿರ್ವಹಣೆ.<br>5. ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.<br>6. ನಿವೃತ್ತಿ ವೇತನ ಸಿದ್ಧಪಡಿಸುವುದು.<br>7.ಆದಾಯ ತೆರಿಗೆ ಕಟಾವಣೆ/ತಃಖ್ತೆ ತಯಾರಿಸುವುದು.<br>8. ವಿದ್ಯಾರ್ಥಿ ವೇತನ ವಿತರಿಸುವುದು. | 5 days | January to December 2012 |
| Deputy Directors of PU Education | 34 | ಕೆಸಿಎಸ್‌ಆರ್, ಕೆಎಫ್‌ಸಿ, ಕೆಬಿಎಂ, ಕನಾಸೇ (ವರ್ತನೆ) ನಿಯಮಗಳು-1966, ಕನಾಸೇ (ಸಿಸಿಎ) ನಿಯಮಗಳು-1957 ವಿಚಾರಣಾಧಿಕಾರಿಗಳ ಕರ್ತವ್ಯಗಳು, ಸೇವಾ ಪುಸ್ತಕಗಳ ನಿರ್ವಹಣೆ, ಕರ್ನಾಟಕ ಶಿಕ್ಷಣ ಕಾಯ್ದೆ, 2006ರ ಪಪೂಶಿ ನಿಯಮಗಳು, ಪಿಂಚಣಿ ನಿಯಮಗಳು, ಕನಾಸೇ(ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 2000, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಹಾಗೂ ಹೆಚ್‌ಆರ್‌ಎಂಎಸ್ ಕುರಿತು. | 7 days | August-2012 |

| | | | | |
|---|---|---|---|---|
| Assistant Directors | 11 | ಕೆಸಿಎಸ್‌ಆರ್, ಕೆಎಫ್‌ಸಿ, ಕನಾಸೇ (ವರ್ತನೆ) ನಿಯಮಗಳು, 1966, ಕನಾಸೇ (ಸಿಸಿಎ) ನಿಯಮಗಳು, 1957, ಮಂಡನಾಧಿಕಾರಿಗಳ ಕರ್ತವ್ಯಗಳು, ಕರ್ನಾಟಕ ಶಿಕ್ಷಣ ಕಾಯ್ದೆ, 2006ರ ಪದವಿ ಪೂರ್ವ ಶಿಕ್ಷಣ ನಿಯಮಗಳು ಮತ್ತು ಹೆಚ್‌ಆರ್‌ಎಂಎಸ್ ನಿರ್ವಹಣೆ ಕುರಿತು. | 7 days | July-2012 |
| Section Officers | 07 | | | |

ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಒಂದು ದಿನದ ಪೂರ್ವಭಾವಿ ಸಭೆ ಏರ್ಪಡಿಸಿ Training Module / Time Table / Schedule ಸಿದ್ಧಪಡಿಸಬಹುದು. ಇದರಿಂದ Target Group ಗೆ Specific Needs ಬಗ್ಗೆ ತರಬೇತಿ ಕೊಟ್ಟಂತಾಗುತ್ತದೆ.

ಪದವಿ ಪೂರ್ವ ಶಿಕ್ಷಣ ಇಲಾಖೆ ಆಡಳಿತ ತರಬೇತಿ ಸಂಸ್ಥೆಯ ನಿಯಮಾನುಸಾರ ತರಬೇತಿಗೆ ತಗಲುವ ವೆಚ್ಚವನ್ನು ಭರಿಸುತ್ತದೆ. ಈ ಬಗ್ಗೆ ಅಂದಾಜು ವೆಚ್ಚದ ಆಯವ್ಯಯವನ್ನು ಸಿದ್ಧಪಡಿಸಿಕೊಟ್ಟಲ್ಲಿ ಅದನ್ನು ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಈ ಸಂಬಂಧ ತಮ್ಮ ಆಡಳಿತ ಸಂಸ್ಥೆಯ ಅಧಿಕಾರಿಗಳ ಜೊತೆಗೆ ಚರ್ಚಿಸಿ, ವೇಳಾಪಟ್ಟಿ ಸಿದ್ಧಪಡಿಸಲು ಪೂರ್ವಭಾವಿ ಸಭೆ ಕರೆದಲ್ಲಿ ಇಲಾಖೆಯ ಅಧಿಕಾರಿಗಳನ್ನು ತಾವು ಸೂಚಿಸಿದ ದಿವಸ ಮೈಸೂರಿಗೆ ಕಳುಹಿಸಿಕೊಡಲಾಗುವುದು.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,
Rashmi

ಡಾ॥ ಅಮಿತಾ ಪ್ರಸಾದ್, ಭಾ.ಆ.ಸೇ.,
ಮಹಾ ನಿರ್ದೇಶಕರು ಮತ್ತು
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆಡಳಿತ ತರಬೇತಿ ಸಂಸ್ಥೆ,
ಲಲಿತ್ ಮಹಲ್ ರಸ್ತೆ, ಮೈಸೂರು–11.